ಎಂದು ಯಾವಾಗಲೂ ಬಯ್ಯುತ್ತಲೇ ಇರುತ್ತಾಳೆ; ತನ್ನ ಪೂರ್ವಜನ್ಮದ ಪ್ರಾರಬ್ಧ ಕರ್ಮ ಎಂದು ತನ್ನನ್ನೇ ಶಪಿಸಿಕೊಳ್ಳುತ್ತಾಳೆ.

ಉಚ್ಚೆ ಮಾಡಲು ಕೂತ ಪ್ರಾಣೇಶ ಇನ್ನೂ ಸ್ವಲ್ಪ ಒತ್ತಡ ಹಾಕಿದ. ಬಾಟಲ್ ಓಪನ್ ಆದಂತೆ ಟಪ್ ಅನಿಸಿ ರಭಸದಿಂದ ಉಚ್ಚೆ ಬಂತು. ನೋಡಿದರೆ ಕಮೋಡೆಲ್ಲ ಕೆಂಪು. ಅನುಮಾನವೇ ಇಲ್ಲ, ರಕ್ತ! ತನ್ನ ಕಣ್ಣನ್ನು ತಾನೇ ನಂಬದಾದ. ಪದ್ಮಜಾಳಿಗೆ ಹೇಳುವುದೋ ಬೇಡವೋ ಎಂದು ಅರೆಕ್ಷಣ ಯೋಚಿಸಿ, 'ಇಂದು ವೆಡ್ಡಿಂಗ್ ಆ್ಯನಿವರ್ಸರಿ, ಅದೂ ಇವತ್ತು ಸಂಜೆ ಅಷ್ಟು ದೊಡ್ಡ ಪಾರ್ಟಿ ಬೇರೆ ಇದೆ, ನಾಳೆ ಹೇಳಿದರಾಯಿತು' ಎಂದುಕೊಂಡ. ಆದರೆ, ಕಣ್ಣ ಮುಂದೆ ಕೆಂಪು ಕೆಂಪಾದ ಕಮೋಡೇ ಕಾಣುತ್ತಿತ್ತು. ರೇಡಿಯಾಲಾಜಿ ಗೆಳೆಯ ಸಂದೀಪ್ ಚಾಟರ್ಜಿಗೆ ಫೋನು ಮಾಡಿ ವಿಷಯ ಹೇಳಿದ. ಕಾಕತಾಳೀಯವಾಗಿ ಚಾಟರ್ಜಿ ವೀಕೆಂಡ್ ಕಾಲ್‌ನಲ್ಲಿ ಇದ್ದಿದುದರಿಂದ ಆಸ್ಪತ್ರೆಯಲ್ಲೇ ಇದ್ದ. "ಬಂದು

